ಮೈಸೂರ ಗಿಜಿಟ್.

ನಂ. 44 . ಸರ್ಕಾರದಿಂದ ಪಾಯಿಷ್ ಆದ್ದು . ಸನ್ 1887.

ಬೆಂಗಳೂರು, ಶನಿವಾರ, ನವೆಂಬರ್ ತಾ|| 5, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪೆಟೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬುಕ್‌ಪೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ ಜಡ್ಜೀರು, ಡಿ|| ಪೆಪ್ಯುಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 18ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1553.—ಮಿಸ್. ಆರ್. ಗೋವಿಂದರಾಜುಲುಯವರು, ಅಜಮಾಯಿಷಿ ತರೀಕ್ ಮಾಹೇ ಮಜಕೂರ್ ಗುರ್ಸೇ ತಾರೀಖು ಮೊದಲು ಆರು ತಿಂಗಳ ಪರಿಯಂತ 3ನೇ ಗ್ರೇಡ್ ಅಸಿಸ್ಟೆಂಟ್ ಸರ್‌ಜೆರ್ಯರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 19ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1527.—ಕೋಲಾರ ತಾಲ್ಲೂಕು ಅಮಲ್ದಾರ್ ಕೆ. ಶ್ರೀನಿವಾಸರಾಯರಿಗೆ ಈ ಆಫೀಸ್ 1887ನೇ ಇಸವಿ ಸೆಪ್ಟೆಂಬರ್ 16ನೇ ಮರ್ತುಂ ಕ್ಯಾಂಪ್ ನಂಬರ್ 1273ನೇ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೇಜ್ ರಜಾ 1887ನೇ ಇಸವಿ ಅಕ್ಟೋಬರ್ 17ನೇ ತಾರೀಖು ವರಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 12ನ ಸೆಪ್ಟಂಬರ್ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ್ 5ನೇ ಮುಕ್ತಂ 1 '7ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಗೆ ಲೈಸೆನ್ಸ್ ಕೊಡಲ್ಪಡಬೇಕಾಗಿ [illegible] ವಿಷಯದಲ್ಲಿ ಜಾಲತೀ ದರಖಾಸ್ತ್ಗೆ 35 ಪರ್ಸೆಂಟ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಶೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ವಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡಪ ದರಖಾಸ್ತು ಮೂಲಕ ಹುಟ್ಟುಬಹುದಾದಂಥ ಪ್ರೀಮಿಯಮ್‌ಯಾನೇ ನಫೆಗೆ ಗನೀ ಕೆಲಸದ ಲೈಸೆನ್ಸ್ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೆ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸಿಗೋಸ್ಕರ, ಇದರಡೀಕಂಡ ಪರತ್ತುಗಳಿಗೆ ಬಿಳಕಟ್ಟಿ ಇರದ ಸೆಕೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಾಕು ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಿಶ್ಚೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು, ಲೈಸೆನ್ಸಿನ ಪರತ್ತುಗಳು ಇದಕ್ಕೆ ಶೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಿಂತೆ ಯಿರುತವೆ. ನಫೇ ಮೊಬಲಗು ಪೂರ್ತಿ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳುವ ನಫೇ ಮೊಬಲಗಿನ ದಶಮಾಂಶಕ್ಕೆ ಸರಿಯಾದ ಮೊಬಲಗು ಠೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಠೇವಣೀ ಮೊಬಲಗು ಮೈಸೂರು ದೇಶದ ದಿರ್ವಾರವರ ಹೆಸರಿಗೆ ಜಮೇ ಹಿಡಿಯತಕ್ಕ ಬಗ್ಗೆ ಮೈಸೂರು ದೇಶದ ಯಾವದಾದರೂ ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡನ್‌ನಲ್ಲಿ 59ನೇ ಸ್ಟ್ರಾಂಡ್ ಸ್ಥಳದಲ್ಲಿರುವ ಮೆಸ್ಸಿಯರಸ್ ಕಾಟ್ಸ್ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಗಾಗಿ ಪಡೆದ ರಸೀತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಠೇವಣೀಗೋಸ್ಕರ ಪಡೆದ ರಸೀತೀ ಸಹಿತವಾಗಿ ದರಖಾಸ್ತು ಬಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಗೆ ದರಖಾಸ್ತು" ಯಂಬದಾಗಿ ಮೇಲೆ ಬರೆಯಲ್ಪಟ್ಟು ಜೆಂಗಳೂರಲ್ಲಿ ಮೈಸೂರು ದೇಶದ ದಿರ್ವಾರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿರ್ವಾರವರಿಗೆ 1887ನೇ ಇಸವಿ ಡಿಸಂಬರ್ 10ನೇ ಮುಕ್ತಮಿನ ಮಧ್ಯಾನ್ಹದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿರ್ವಾರವರಿಂದ ಜೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯಂಬ ಕಟ್ಟಣದೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಬೈರ್ ವ್ಯವಸ್ಥೆಯು ದಿರ್ವಾರವರಿಗೆ ಶೇರಿರುತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡಪ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿರ್ವಾರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಿಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ ಉಳಿದ ಭಾಗವನ್ನು ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಾಗಲೀ ಅಥವಾ ಲಂಡನ್ ಪಟ್ಟಣದ ಮೆಸ್ಸಿಯರ್ಸ್ ಕಾಟ್ಸ್ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮುಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಹೆಸರು ದೇಖೀಲ್ ಅವರ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟಿರುತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿಯು, ಅವರು ಖಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ತಾಂ ಮಾಡುವ ಬಗ್ಗೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲಿಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ನಫೇ ಬಾಬತು ಉಳಿದ ಬಾಕಿಯನ್ನು ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ಣಮೆಂಟ್ ತರಫಿನಲ್ಲಿ ದಿರ್ವಾರವರಿಂದ ರುಜೂ ಮಾಡಲ್ಪಡುವ ಬಗ್ಗೆ ಇದಕ್ಕೆ ಜಂಟಿಸೋಣಾದ B. ನಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟ್ಯಾಂಪ್‌ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಫೆಯ ಬಾಕೀ ಮೊಬಲಗನ್ನು ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿರ್ವಾರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಹಾಂಗೆ ತಪ್ಪಿಹೋದ ತಾರೀಖಿನ ವರಿಗೆ ಪಾವತೀ ಮಾಡಲ್ಪಟ್ಟಿರುವ ತೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಗೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶಧ ಬ್ರಿಟಿಷ್ ಟೊಪೋಗ್ರ್ಯಾಫಿಕಲ್ ಸರ್ವೆ ಇಲಾಖೇಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯ (ಅಂಗುಲ ವಂದಕ್ಕೆ ವಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರೆಲ್ಲಿರುವ ದಿರ್ವಾರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರಿಟೆರಿಯವರನ್ನ ಜೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜ್ ನೋಡುವ ಬಗ್ಗೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಸೋಜೀಬ್,
ಆರ್. ವಿಜಯಿಂದ್ರರಾವ್,
ಚೀಫ್ ಸೆಕ್ರಟರಿ.